ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಅಧ್ಯಕ್ಷರೆ, ನಮಗೆ ಕಂದಾಯ ಇಲಾಖೆಯಿಂದ ಬಹಳ ಬೇಜವಾಬ್ದಾರಿಕೆಯ ಉತ್ತರಗಳು ಬರುತ್ತಿವೆ. ಮೊದಲನೇ ಪ್ರಶ್ನೆಗೂ ಅದೇ ತರಹದ ಬೇಜವಾಬ್ದಾರಿ ಉತ್ತರ. ಎರಡನೇ ಪ್ರಶ್ನೆಗೆ ಸ್ವಲ್ಪ ಇನ್ನೂ ಹೆಚ್ಚಿನ ಬೇಜವಾಬ್ದಾರಿ ಉತ್ತರ. ಮಾನ್ಯ ಮಂತ್ರಿಗಳಿಗೆ ಗೊತ್ತಿದೆ. ಈ ದ ಒಂದೂವರೆ ವರ್ಷದ ಹಿಂದೆ ಈ ಪ್ರಶ್ನೆ ಸದನದಲ್ಲಿ ಬಂದಾಗ ಇದೇ ಉತ್ತರವನ್ನು ತಾವು ಕೊಟ್ಟಿದ್ದೀರಿ. ಬೇರೆ ಉತ್ತರವನ್ನೇ ಕೊಡಲಿಲ್ಲ. ನಾನು ಏನು ಸೆಜೆಸ್ಟ್ ಮಾಡಿದ್ದೆ ಎಂದರೆ, ಈ 'ಒಲ್ಡ್ ಏಜ್ ಪೆನ್‌ಷನ್ ವಿಡೋ ಪೆನ್‌ಷನ್ 4 ತಿಂಗಳಿಗೆ 6 ತಿಂಗಳಿಗೆ ಒಂದೊಂದು ಸಾರಿ ಹೋಗುತ್ತದೆ. ಕೋಆರ್ಡಿನೇಷನ್ ಪೋಸ್ಟ್ ಆಫೀಸ್, ಟ್ರೆಜರಿ, ತಹಶೀಲ್ದಾರ್ ಮತ್ತು ಬೆನಿಫಿಶರಿ ಈ ನಾಲ್ಕರ ಮಧ್ಯೆ ಆಗಬೇಕಾಗುತ್ತದೆ. Absolutely there is no Co-Ordination ಈಗ ಭೂಮಿ ಕಾರ್ಯಕ್ರಮ ಇದೆ We have appreciated that ಆ ರೀತಿ Widow pension ಮತ್ತೆ Old age pension ಅನ್ನು ಕೊಡುವಂಥ ಸಂದರ್ಭದಲ್ಲಿ ಆ ಪೋಸ್ಟ್ ಮ್ಯಾನ್ ಏನು ಮಾಡುತ್ತಾನೆಂದರೆ, 6 ತಿಂಗಳ ವೇತನ 600 ರೂಪಾಯಿ ಆದರೆ 400 ರೂಪಾಯಿ ಫಲಾನುಭವಿಗೆ ಕೊಟ್ಟು ಅವರಿಂದ ಸಹಿ ಹಾಕಿಸಿಕೊಳ್ಳುತ್ತಾನೆ. ವಿಧಿ ಇಲ್ಲ ಅದಕ್ಕಾಗಿ ಅವರು ಮಾಡುತ್ತಾರೆ. ಈ ಸ್ಥಿತಿ ಬಂದಿದೆ. ಮಾನ್ಯ ಅಧ್ಯಕ್ಷರೆ, ಇದು ತಮ್ಮ ಗಮನಕ್ಕೂ ಬಂದಿರುತ್ತದೆ. ತಾವು ಹೋದಾಗಲೂ ಜನತಾ ಸಂದರ್ಶನಕ್ಕೆ ಅವರೆಲ್ಲಾ ಬಂದಿರುತ್ತಾರೆ. ಆದ್ದರಿಂದ ನಾನು ಸರ್ಕಾರಕ್ಕೆ ಕೇಳತಕ್ಕಂಥದ್ದು ಏನೆಂದರೆ, ಒಂದೂವರೆ ವರ್ಷದ ಹಿಂದೆ ತಾವು ಏನು ಭರವಸೆ ಕೊಟ್ಟಿದ್ದೀರಿ, ಒಂದು ಕೋಆರ್ಡಿನೇಷನ್ ಇರಬೇಕಾಗುತ್ತದೆ. ಯಾವ ತಾಲ್ಲೂಕಿಗೆ ಬೇಕಾದರೆ ಯಾವ ಹಳ್ಳಿಗೆ ಬೇಕಾದರೆ ನೀವು ಹೋಗಿ, ಪಟ್ಟಣದಲ್ಲಿ ಕೂಡ 4 ತಿಂಗಳಿಗೆ 6 ತಿಂಗಳಿಗೆ ಒಮ್ಮೆ ಕೂಡ ದುಡ್ಡು ಬರುವುದಿಲ್ಲವೆಂದು ಶ್ರೀ ದಿನೇಶ್ ಗುಂಡೂರಾವ್ ಅವರು ಹೇಳಿದರು. 4 ತಿಂಗಳಿಗೆ, 6 ತಿಂಗಳಿಗೆ ಒಂದು ಸಲವಾದರೂ ದುಡ್ಡು ಬರುವುದಿಲ್ಲವೆಂದು ಹೇಳಿದರೆ ಕಷ್ಟವಾಗುತ್ತದೆ. ಕೋಆರ್ಡಿನೇಷನ್ ಮಾಡುವುದಕ್ಕೆ ಸರ್ಕಾರಕ್ಕೆ ಇರುವ ತೊಂದರೆ ಏನು ಎನ್ನುವುದನ್ನು ಮಾನ್ಯ ಮಂತ್ರಿಗಳು ಹೇಳಬೇಕು.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ:- ಮಾನ್ಯ ಅಧ್ಯಕ್ಷರೆ, ತೊಂದರೆ ಏನೂ ಇಲ್ಲ. ಈವಾಗ ನಾವು ಖಜಾನೆಯಲ್ಲಿಯೇ ನಾವು ವಿತರಣೆ ಮಾಡತಕ್ಕಂಥ ವ್ಯವಸ್ಥೆ ಮಾಡಿದರೆ ಅವರಿಗೆ ಅನುಕೂಲವಾಗುತ್ತದೆ. ಈ ಗಣಕೀಕರಣ ಆದಮೇಲೆ ಅಂದರೆ ಈ ಕೆಲಸ ಮುಗಿದುಹೋಗಿದೆ. ಇನ್ನು ಅನುಕೂಲವಾಗುತ್ತದೆ. ಇಲ್ಲಿಯವರೆಗೆ ಕಡಿಮೆ ಸಿಬ್ಬಂದಿಗಳು; ಸಿಬ್ಬಂದಿಗಳ 5 ಪರ್ಸೆಂಟ್ ಕಡಿತ, ಇವೆಲ್ಲಾ ಆಗಿ ಸಿಬ್ಬಂದಿಗಳೇ ಇರಲಿಲ್ಲ. ಅದಕ್ಕೋಸ್ಕರ ಈವಾಗ ಖಜಾನೆಯನ್ನೇ ಗಣಕೀಕರಣ ಮಾಡುತ್ತಿದ್ದೇವೆ. ಅದು ಆದಮೇಲೆ ಅವರಿಗೆ ಸಮಯಕ್ಕೆ ಸರಿಯಾಗಿ ಸಿಗುತ್ತದೆ.

ಅಧ್ಯಕ್ಷರು:- ಈಗ ಶ್ರೀ ಕೆ.ಹೆಚ್. ಹನುಮೇಗೌಡ ಮತ್ತು ಎ.ಆರ್. ಕೃಷ್ಣಮೂರ್ತಿ ಇಬ್ಬರೂ ಒಂದೇ ಸಲ ಪ್ರಶ್ನೆಯನ್ನು ಕೇಳಿ. ತಮ್ಮಿಬ್ಬರದ್ದೂ ಸಹ ಹೆಚ್ಚು ಕಡಿಮೆ ಒಂದೇ ತರಹದ ಪ್ರಶ್ನೆಯಿದೆ. ತಾವು ಕೇಳಿ.

ಹಾಸನ ಜಿಲ್ಲೆಯಲ್ಲಿ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ಕಾಮಗಾರಿ

136(503) ಶ್ರೀ ಹನುಮೇಗೌಡ ಕೆ.ಹೆಚ್.(ಹಾಸನ) ಮಾನ್ಯ ಕಾನೂನು ಮತ್ತು ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹಾಸನ ಜಿಲ್ಲೆಯಲ್ಲಿ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಗೆ ಯಾವ ಯಾವ ಪ್ರದೇಶ ಒಳಪಟ್ಟಿದೆ ತಿಳಿಸುವುದು.

ಆ) ಕಳೆದ ಮೂರು ವರ್ಷಗಳಿಂದ ಈ ಬೋರ್ಡ್‌ನಿಂದ ಯಾವ ಯಾವ ವಿಧಾನ ಸಭಾ ಕ್ಷೇತ್ರಕ್ಕೆ ಎಷ್ಟು ಕಾಮಗಾರಿಗಳು ಮಂಜೂರಾಗಿವೆ ವಿವರ ನೀಡುವುದು.

ಇ) ಕಳೆದ ಮೂರು ವರ್ಷದಿಂದ ಯಾವ ಯಾವ ವಿಧಾನ ಸಭಾ ಕ್ಷೇತ್ರಕ್ಕೆ ಎಷ್ಟೆಷ್ಟು ಹಣ ಪಾವತಿಯಾಗಿದೆ ಹಾಗೂ ಎಷ್ಟು ಬಿಲ್‌ಗಳಿಗೆ ಹಣ ಪಾವತಿಯಾಗಬೇಕಾಗಿದೆ ತಿಳಿಸುವುದು?

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಯ ಸಚಿವರು)

ಅ) ಆಲೂರು, ಅರಕಲಗೂಡು, ಬೇಲೂರು, ಹಾಸನ ಮತ್ತು ಸಕಲೇಶಪುರ ತಾಲ್ಲೂಕುಗಳು ಈ ಮಂಡಳಿಯ ವ್ಯಾಪ್ತಿಯೊಳಗೆ ಬರುತ್ತದೆ.

ಆ) ವಿವರಗಳನ್ನು ಅನುಬಂಧ-I ರಲ್ಲಿ ನೀಡಲಾಗಿದೆ.

ಇ) ವಿವರಗಳನ್ನು ಅನುಬಂಧ-2 ರಲ್ಲಿ ನೀಡಲಾಗಿದೆ.

ಅನುಬಂಧ - 1

ಮಂಡಳಿಯಿಂದ ಮಂಜೂರಾದ ಕಾಮಗಾರಿಗಳ ಸಂಖ್ಯೆ

ಕ್ಷೇತ್ರ	ಮಂಜೂರಾದ ಮಂಡಳಿಯ ಕಾಮಗಾರಿಗಳು			ನಬಾರ್ಡ್
	1999-2000	2000-2001	2001-2002	ಕಾಮಗಾರಿಗಳು
ಹಾಸನ	1	10	4	4
ಬೇಲೂರು	-	9	4	2
ಅರಕಲಗೂಡು	-	12	4	2
ಸಕಲೇಶಪುರ	1	3	2	3
ಗಂಡಸಿ	6	8	1	4

ಅನುಬಂಧ - 2

ಪಾವತಿಯಾಗಬೇಕಾದ ಬಿಲ್ಲುಗಳ ಬಾಕಿ ವಿವರ

	ರೂ. ಲಕ್ಷಗಳಲ್ಲಿ
ಹಾಸನ	14.13
ಗಂಡಸಿ	10.26
ಬೇಲೂರು	9.67
ಸಕಲೇಶಪುರ	10.89
ಅರಕಲಗೂಡು	0.88
ಒಟ್ಟು	45.83

ಹಣ ಬಿಡುಗಡೆ ಮಾಡಿದ ವಿವರ

ಮಂಡಳಿಯಿಂದ ಕ್ಷೇತ್ರವಾರು ಹಣ ಬಿಡುಗಡೆ ಮಾಡುವುದಿಲ್ಲ ಅನುಷ್ಠಾನಾಧಿಕಾರಿಗಳಿಗೆ ಬಿಡುಗಡೆ ಮಾಡಿದ ಹಣದ ವಿವರ ಈ ಕೆಳಕಂಡಂತಿದೆ:

	ರೂ. ಲಕ್ಷಗಳಲ್ಲಿ
1999-2000	45.00
2000-2001	110.56
2001-2002	41.83
ನಬಾರ್ಡ್ ಕಾಮಗಾರಿಗಳಿಗೆ	292.365

ಮಲೆನಾಡು ಪ್ರದೇಶಾಭಿವೃದ್ಧಿ ಕಾಮಗಾರಿ

142(798) ಶ್ರೀ ಕೃಷ್ಣಮೂರ್ತಿ ಎ.ಆರ್. (ಸಂತೇಮರಳ್ಳಿ) ಮಾನ್ಯ ಕಾನೂನು ಮತ್ತು ಮಲೆನಾಡು ಪ್ರದೇಶಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಲೆನಾಡು ಪ್ರದೇಶಾಭಿವೃದ್ಧಿ ಯೋಜನೆಯಡಿಯಲ್ಲಿ ಯಾವ ಯಾವ ಕ್ಷೇತ್ರಕ್ಕೆ ಎಷ್ಟೆಷ್ಟು ಹಣ ಬಿಡುಗಡೆ ಮಾಡಲಾಗಿದೆ. ಯಾವ ಯಾವ ಅಭಿವೃದ್ಧಿ ಕಾರ್ಯಕ್ಕಾಗಿ ಎಷ್ಟೆಷ್ಟು ಹಣ ಬಿಡುಗಡೆ ಮಾಡಲಾಗಿದೆ ಎಂಬುದರ ಬಗ್ಗೆ ಕ್ಷೇತ್ರವಾರು ವಿವರ ನೀಡುವುದು,

ಆ) ಮಲೆನಾಡು ಅಭಿವೃದ್ಧಿ ಯೋಜನೆಯಡಿಯಲ್ಲಿ ಯಾವ ಯಾವ ಸಾಲಿನಲ್ಲಿ ಎಷ್ಟೆಷ್ಟು ಹಣ ಬಿಡುಗಡೆ ಮಾಡಲಾಗಿದೆ ಎಂಬುದರ ಬಗ್ಗೆ ಸಂತೇಮರಳ್ಳಿ ಹಾಗೂ ಚಾಮರಾಜನಗರ ಕ್ಷೇತ್ರಕ್ಕೆ ಸಂಬಂಧಿಸಿದಂತೆ ವಿವರ ನೀಡುವುದು.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಯ ಸಚಿವರು)

ಅ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. ಮಂಡಳಿಯು ಕ್ಷೇತ್ರವಾರು ಹಣ ಬಿಡುಗಡೆ ಮಾಡುವುದಿಲ್ಲ. ಜಿಲ್ಲಾವಾರು ಅನುಷ್ಠಾನಾಧಿಕಾರಿಗಳಿಗೆ ಹಣ ಬಿಡುಗಡೆಯಾಗುತ್ತಿದೆ. ಜಿಲ್ಲಾವಾರು ಖರ್ಚಿನ ವಿವರ ಅನುಬಂಧದಲ್ಲಿ ನೀಡಲಾಗಿದೆ.

ಆ)

	(ರೂ. ಲಕ್ಷಗಳಲ್ಲಿ)	
	31.3.01	31.3.02
ಮಂಡಳಿಯ ಕಾಮಗಾರಿ	ಖರ್ಚು	
ಚಾಮರಾಜನಗರ	9.90	5.95
ಸಂತೇಮರಳ್ಳಿ	-	-
ನಬಾರ್ಡ್ ಕಾಮಗಾರಿ		
ಚಾಮರಾಜನಗರ	-	9.85
ಸಂತೇಮರಳ್ಳಿ	-	104.76